ಕವಿತೆ




## ಸವಿತಾ ನಾಗಭೂಷಣ

ಕಲೆ: ಮುರಳೀಧರ್ ರಾಥೋಡ್






# ಹಾಲೂಡುವೆ....

ಕತ್ತರಿಯಾಡದಿದ್ದರೆ ಬೆಳೆಯಗೊಟ್ಟರೆ
ಮುಡಿಯೂ ಇರುತ್ತಿತ್ತು ನಿನಗೆ

ಎದೆಯೂ ನಿನಗಿದೆ ಪುಟ್ಟದಾದರೂ
ಮೊಲೆ ತೊಟ್ಟೂ ಇರುವುದಲ್ಲವೆ?
ಮುಟ್ಟುಚಟ್ಟುಗಳಿಲ್ಲ
ಹಾಲುಕ್ಕುವುದಿಲ್ಲ ....

ಹಾಲೂಡುವೆ, ಕಾಪಾಡುವೆ
ಇಷ್ಟೇ ಭಿನ್ನಭೇದ ನಿನಗೆ ನನಗೆ!

# ಹೂಚಿಟ್ಟೆ

ಮುಟ್ಟಿ ಮಾತನಾಡಿಸಿ
ಹೀರಿ ಅಂದ ಚಂದ
ಗಂಧ ಮಕರಂದ ಮೊಟ್ಟೆ
ಇಟ್ಟು ಮರಿ ಮಾಡಿ
ಆಡಿ ಕೂಡಿ .....

ಅರಳಿವೆ ಚಿಟ್ಟೆಗಳು
ಹಾರಾಡಿವೆ ಹೂವುಗಳು!

